ಕವನ

# ಅವನ ಪದ ಸೋಂಕಿದರೆ ಶಿವನಾಗನೇ ಜೀವ !

ಸ್ವಾಮಿ ಹರ್ಷಾನಂದ



ನಾನೊಂದು ಕಾಡಲ್ಲಿ
ಬಿದಿರಾಗಿ ಬಿದ್ದಿದ್ದೆ
ಮಳೆಯಲ್ಲಿ ನೆನೆಯುತ್ತ
ಬಿಸಿಲಲ್ಲಿ ಬತ್ತುತ್ತ
ಬಸವಳಿದು ಸತ್ತಿದ್ದೆ ॥ ೧ ॥

ಕಾಡಲ್ಲಿ ಬರುತಿದ್ದ
ಜನರೆಲ್ಲ ನನ್ನನ್ನು
ತುಳಿತುಳಿದು ತುಳಿತುಳಿದು
ಹತ್ತಿಕ್ಕಿ ಮೆಟ್ಟುತ್ತ
ಪೋಗುತಿರ್ದರು ಅಯ್ಯ ॥ ೨ ॥

ಅಂದೊಂದು ದಿನದಂದು
ಕರಿಯನಾದರು ಚಂದ
ಪೋರನೊಬ್ಬನು ಬಂದ
ನನ್ನ ಬೆನ್ನಲ್ಲಿ ನಿಂದು
ನೋಡಿದನು ಕೆಳಗೆ ॥ ೩ ॥

ಪಾದವನು ಚುಚ್ಚಿದ್ದ
ನನ್ನನ್ನು ನೋಡಿದೆಡೆ
ಬಿಸುಡಲೋಸುಗ ಬೇಗ
ಕರದಿಂದ ಎತ್ತುತ್ತ
ದಿಟ್ಟಿಸಿದನಾ ಬಾಲ ॥ ೪ ॥

ನೋಡುತ್ತ ನೋಡುತ್ತ
ಮುಖದಲ್ಲಿ ಸಿಟ್ಟಿಂದ
ಮೂಡಿದ್ದ ಗಂಟುಬ್ಬು
ಬಲು ಬೇಗ ತೆರವಾಗಿ
ಪದ್ಮವಾಯಿತು ವದನ ॥ ೫ ॥

ಆಗಲೇ ನನ್ನನ್ನು
ಅಕ್ಕರದಿ ಮನೆಗೊಯ್ದು
ಮಜ್ಜನವನೆರೆಯುತ್ತ
ತೂತನ್ನು ಕೊರೆದಿರಲು
ಸಿರಿವಾದ್ಯವಾದೆ ॥ ೬ ॥

ತುಟಿಗಿತ್ತು ಎನ್ನನ್ನು
ಊದಿರಲು ಉಸಿರನ್ನು
ಸ್ವರಸಪ್ತ ಸಂಗೀತ
ಹೊರಬಿತ್ತು ಎನ್ನಿಂದ
ನಾ ಧನ್ಯನಾದೆ ॥ ೭ ॥

ಕಾಡಲ್ಲಿ ಬಿದ್ದಿದ್ದ
ತುಳಿತದಿಂ ಸೊರಗಿದ್ದ
ಯಾರಿಗೂ ಬೇಡಾದ
ನಾನಿಂದು ಅತಿಮೂಲ್ಯ
ವಸ್ತುವಾದೆ ॥ ೮ ॥

ಎಲೆ ಸಖನೆ ನೀನಿಂದು
ಹುಲುಮನುಜ ನಾನೆಂದು
ಗೋಳಿಡುತಲಿರಲಾಗ
ದುಃಖಸಾಸಿರವನ್ನು
ತ್ಯಜಿಸಲಾರೆ ॥ ೯ ॥

ಆದರೀಗಲೆ ನೀನು
ಪೋರನನು ಬಳಿಸಾರಿ
ಮರೆಹೊಕ್ಕು ಬೇಡಿದರೆ
ಪೊರೆಯದಿರುವನೆ ಬೇಗ
ನೋಡು ಅವನಾಣೆ ॥ ೧೦ ॥

ಪರುಷಮಣಿ ಸೋಂಕಿದರೆ
ಕನಕವಾಗದೆ ಲೋಹ
ಅವನ ಪದ ಸೋಂಕಿದರೆ
ಶಿವನಾಗನೇ ಜೀವ
ಅಹುದು ಅಹುದು ॥ ೧೧ ॥